ದೇವಸ್ಥಾನದ ಹುಂಡಿಗಳಿಗೆ ಇಲಾಖಾ ಮೊಹರು

751 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ದೇವಸ್ಥಾನಗಳಿಗೆ ಸಂಬಂಧಿಸಿದಂತೆ ಮದರಾಸು ಹಿಂದೂ ಧಾರ್ಮಿಕ ದತ್ತಿ ಮತ್ತು ಉಂಬಳಿ (1951) ಕಾಯಿದೆ ಈಗಲೂ ಅನ್ವಯಿಸುತ್ತಿರುವುದು ನಿಜವೇ?*

ಆ) *ಸದರಿ ಕಾಯಿದೆಯಲ್ಲಿ ದೇವಸ್ಥಾನದ ಹುಂಡಿಗಳಿಗೆ ಇಲಾಖಾ ಮೊಹರು ಹಾಕುವ ಬಗ್ಗೆ ಯಾವ ವಿಧಿಯನ್ವಯ ಸಂಬಂಧ ಪಟ್ಟವರಿಗೆ ಅಧಿಕಾರ ನೀಡಲಾಗಿದೆ? (ವಿವರ ನೀಡುವುದು)*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ನಿಜ.

ಆ) ಮದರಾಸು ಹಿಂದೂ ಮತೀಯ ಮತ್ತು ಧರ್ಮಾರ್ಥ ಉಂಬಳಿ ಕಾಯ್ದೆ 1951 ಸೆಕ್ಷನ್ 20 ರಡಿಯಲ್ಲಿ ಎಲ್ಲಿ ಹುಂಡಿ ಹಣ ದುರುಪಯೋಗವಾಗುವ ಸಂದರ್ಭಗಳಿದೆಯೋ ಅಂಥ ಕಡೆಗಳಲ್ಲಿ ಹುಂಡಿಗಳಿಗೆ ಮೊಹರು ಹಾಕುವಂತೆ ಜಿಲ್ಲಾಧಿಕಾರಿಗಳಿಗೆ ಅಧಿಕಾರಿ ನೀಡಲಾಗಿದೆ.

ಸಹಕಾರ ಸಂಘಗಳಿಂದ ರೈತರಿಗೆ ಸಾಲ

752 - ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸಹಕಾರ ಸಂಘಗಳ ಮೂಲಕ ರೈತರುಗಳು ಪಡೆದ ಸಾಲವೆಷ್ಟು? ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಬೆಳೆ ನಾಶ ಹೊಂದಿದ ಪ್ರದೇಶದ ರೈತರಿಗೆ ಸಾಲವನ್ನು ಮನ್ನಾ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?*

ಇ) *ಇಲ್ಲದಿದ್ದರೆ ಕಾರಣಗಳೇನು?*

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ರಾಜ್ಯದಲ್ಲಿ ಸಹಕಾರ ಸಂಘಗಳ ಮೂಲಕ 1997-98ನೇ ಸಾಲಿಗೆ ರೈತರುಗಳು ಪಡೆದ ಸಾಲದ ವಿವರ ಕೆಳಕಂಡಂತಿದೆ.